**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂ: 21/2022**

| | | | |
|---|---|---|---|
| ಹೆಸರು | : ರೋಹನ್ | | ಸಿ.ಡಬ್ಲ್ಯೂ 8 |
| ತಂದೆಯ ಹೆಸರು | : ಶೇಖರ | | ಪಿ.ಡಬ್ಲ್ಯೂ 7 |
| ವಯಸ್ಸು | : 25 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸ ಸ್ಥಳ | : ಬೆಕ್ಕಳಲೆ | | |

ಸಾಕ್ಷಿಗೆ ದಿನಾಂಕ: **13.12.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ .**

ಈ ಪ್ರಕರಣದ ಆರೋಪಿ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ 11 ದಾಖಲೆಯಲ್ಲಿರುವ ಸಹಿ ನನ್ನದೇ. ನಿಪಿ11 ಕ್ಕೆ ನಾನು ಶಿಂಷಾ ನದಿಯ ಪಕ್ಕದ ಗದ್ದೆಯ ಬಳಿ ನೀರು ಹಾಯಿಸುತ್ತಿದ್ದಾಗ ಪೊಲೀಸರು ಬಂದು ಸಹಿ ಪಡೆದಿರುತ್ತಾರೆ. ಆ ದಿನ ನನ್ನ ಜೊತೆ ಪಕ್ಕದ ಜಮೀನಿನ ಚಾಸಾ 7 ರವರು ಸಹಿ ಮಾಡಿರುತ್ತಾರೆ. ಯಾವ ವಿಚಾರಕ್ಕೆ ಪಡೆಯುತ್ತಿದ್ದಾರೆ ಎಂದು ನನಗೆ ಹೇಳಿಲ್ಲ. ನನ್ನ ಸಮಕ್ಷಯ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ, ಖಾಲಿ ಕಾಗದಕ್ಕೆ ನನ್ನ ಸಹಿ ಪಡೆದಿರುತ್ತಾರೆ. 4-5 ಜನ ಪೊಲೀಸರು ಬಂದಿದ್ದರು. ಒಂದರಿಂದ ಒಂದುವರೆ ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ಆಗ ಸಮಯ ಸಂಜೆ ಸುಮಾರು 4-00 ಗಂಟೆಯಾಗಿತ್ತು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾರುನ್ನು ವಶಕ್ಕೆ ಪಡೆದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದಿಲ್ಲ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ**

. ದಿ: 03.11.2021 ರಂದು ನಿಪಿ 11 ಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶಿಂಷಾ ಬಳಿ ಹುಡುಗರು ಮೊಟಾರ್ ಸೈಕಲ್ ನಿಲ್ಲಿಸಿಕೊಂಡು ದರೋಡೆ ಮಾಡುತ್ತಿರುವ ಬಗ್ಗೆ ನಮಗೆ ಮಾಹಿತಿ ಬಂದಿದೆ ಎಂದು ದಾಳಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನನ್ನು ಪಂಚರಾಗಿ ಬರುವಂತೆ ಕೇಳಿದ್ದು, ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ತಮ್ಮ ಜೀಪಿನಲ್ಲಿಯೇ ಅವರು ನನ್ನನ್ನು ಸೇತುವೆಯ ಬಳಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸ್ವಲ್ಪ ಹಿಂದೆ ನಿಲ್ಲಿಸಿಕೊಂಡು ನೋಡುತ್ತಿದ್ದಾಗ 5 ಜನ ಆಸಾಮಿಗಳು ಮೋಟಾರ್ ಸೈಕಲ್‌ನ್ನು ನಿಲ್ಲಿಸಿಕೊಂಡು ಕೈಯಲ್ಲಿ ಲಾಂಗ್ ಮತ್ತೊಬ್ಬನ ಕೈಯಲ್ಲಿ ಮೆಣಸಿನ ಪುಡಿ, ಮತ್ತೊಬ್ಬನ ಕೈಯಲ್ಲಿ ಡ್ರ್ಯಾಗನ್ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಪೊಲೀಸರು ಪಕ್ಕದಲ್ಲಿ ಹೋಗುವಾಗ ಸದರಿ ಆಸಾಮಿಗಳೂ ಕೈಯಲ್ಲಿ ಇದ್ದ ವಸ್ತುಗಳನ್ನು ಅಲ್ಲಿಯೇ ಬಿಸಾಡಿ ಓಡಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ.

2. ಪೊಲೀಸರು ಅವರನ್ನು ಸುತ್ತುವರೆದು ಅವರನ್ನು ಹಿಡಿದು ಅವರ ವಿಳಾಸ ಕೇಳಿದಾಗ 1ನೇ ಆರೋಪಿಯು ತನ್ನ ಹೆಸರು ಪ್ರಶಾಂತ್ ಕುಮಾರ್ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ರಶಾಂತ್ ಕುಮಾರರವರೇ ಆ ದಿನ ಡ್ರ್ಯಾಗನ್ ಹಿಡಿದು ನಿಂತಿದ್ದ ವ್ಯಕ್ತಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಮೆಣಸಿನ ಪುಡಿ ಹಿಡಿದು ನಿಂತಿದ್ದ ವ್ಯಕ್ತಿಯನ್ನು ಕೇಳಲಾಗಿ ತನ್ನ ಹೆಸರನ್ನು ಗೋಪಾಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 3ನೇ ಆರೋಪಿ ಶ್ರೀಧರ್ ಮತ್ತು ಉಳಿದ ಆರೋಪಿಗಳು ಭರತ್ ಮತ್ತು ರಮೇಶ್‌ರವರು ತಮ್ಮ ವಿಳಾಸವನ್ನು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಇದ್ದ ಕೆಎ-11-ಇಎಲ್-770 ಮತ್ತು ಕೆಎ-05-ಹೆಚ್.ಎಲ್.-4026 ವಾಹನಗಳು ಸಹ ಇದ್ದವು ಎಂದರೆ ಸರಿಯಲ್ಲ. ಸದರಿ ಸ್ಥಳವು ಹುಲಿಯೂರು ದುರ್ಗ ಬೆಕ್ಕಳಹಳ್ಳಿಯಾಗಿರುತ್ತದೆ ಎಂದರೆ ಸರಿಯಲ್ಲ. ಕೆಎ-11-ಇಎಲ್-770 ಮತ್ತು ಕೆಎ-05-ಹೆಚ್.ಎಲ್.-4026 ವಾಹನಗಳು, ಮೆಣಸಿನ ಪುಡಿ,

ಡ್ರ್ಯಾಗರ್, ಒಂದು ಹಿಡಿಕೆಯುಳ್ಳ 6 ಅಡಿ ಉದ್ದ ಇರುವ ಒಂದು ಲಾಂಗ್ ಮತ್ತು ಆರೋಪಿಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ನಾನು ದಿ: 12.11.2021 ರಂದು ಪೊಲೀಸರಿಗೆ ಈಗ ಓದಿ ಹೇಳಲಾದ ನಿಪಿ 13 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 11 ನ್ನು ಸ್ಥಳದಲ್ಲಿಯೇ ಮದ್ಯಾಹ್ನ 12-45 ರಿಂದ 2-00 ಗಂಟೆಯ ಒಳಗಾಗಿ ಬರೆದಿದ್ದು, ನಾನು ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಅನುಕೂಲ ಮಾಡಿಕೊಡಲು ಗೊತ್ತಿದ್ದೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ.**

**<u>ಮರು ವಿಚಾರಣೆ ಇಲ್ಲ.</u>**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.